ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 422 (563)

ಸದಸ್ಯರ ಹೆಸರು : ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 21.02.2022

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ನೀಡುತ್ತಿರುವ ಪರಿಹಾರದ ಮೊತ್ತ ಅಲ್ಪ ಪ್ರಮಾಣದಲ್ಲಿ ಇರುವುದರಿಂದ, ಆ ರೈತರು ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ವನ್ಯ ಪ್ರಾಣಿಗಳ ದಾಳಿಯಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಈ ಕೆಳಕಂಡಂತೆ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ:-

➤ ವನ್ಯ ಪ್ರಾಣಿಗಳ ದಾಳಿಯಿಂದ ಉಂಟಾಗುವ ಸಾಕುಪ್ರಾಣಿ ಹತ್ಯೆ ಪ್ರಕರಣಗಳಲ್ಲಿ ಆದೇಶ ಸಂಖ್ಯೆ: ಅಪಜೀ-109-ಎಫ್‌ಎಪಿ-2014, ದಿನಾಂಕ: 13/08/2014ರನ್ವಯ ಕುರಿ, ಮೇಕೆ ಮೃತ ಪಟ್ಟಲ್ಲಿ ರೂ.5,000/-ಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

➤ ಸರ್ಕಾರದ ಆದೇಶ ಸಂಖ್ಯೆ:-ಅಪಜೀ-109-ಎಫ್‌ಎಪಿ-2014, ದಿನಾಂಕ: 13/08/2014ರನ್ವಯ ಹಸು, ಎತ್ತು, ಎಮ್ಮೆ ಮತ್ತು ಕೋಣ ಮೃತಪಟ್ಟಲ್ಲಿ ಪಾವತಿಸಲಾಗುತ್ತಿದ್ದ ರೂ.10,000/-ಗಳ ದಯಾತ್ಮಕ ಧನವನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ 144 ಎಫ್‌ಎಪಿ 2020, ದಿನಾಂಕ:20-04-2021 ರನ್ವಯ ಎಸ್. ಡಿ. ಆರ್. ಎಫ್. (State Disaster Response Fund)ರಲ್ಲಿನ ದರಗಳಂತೆ 2021-22ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.30,000/-ಗಳ ಗರಿಷ್ಠ ಮೊತ್ತವನ್ನು ಪಾವತಿಸಲಾಗುತ್ತಿದೆ.</td></tr>
<tr><td>ಆ)</td><td>ಬಂದಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಎಷ್ಟು ಜಾನುವಾರುಗಳು ಮೃತಪಟ್ಟಿವೆ; ಸದರಿ ಪ್ರಕರಣಗಳಲ್ಲಿ ರೈತರಿಗೆ ವಿತರಿಸಿರುವ ಪರಿಹಾರದ ಮೊತ್ತ ಎಷ್ಟು; (ಪ್ರಕರಣವಾರು ವಿವರ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಉಂಟಾದ ಸಾಕು ಪ್ರಾಣಿಗಳ ಪ್ರಾಣಹಾನಿ ಪ್ರಕರಣಗಳ ಹಾಗೂ ವಿತರಿಸಲಾದ ಪರಿಹಾರ ಧನದ ವಿವರ ಈ ಕೆಳಕಂಡಂತಿದೆ:-

<table><tr><th rowspan="2">ವರ್ಷ</th><th colspan="2">ಸಾಕುಪ್ರಾಣಿ ಪ್ರಾಣ ಹಾನಿ</th></tr><tr><th>ಪ್ರಕರಣಗಳ ಸಂಖ್ಯೆ</th><th>ಮೊತ್ತ (ರೂ.ಗಳಲ್ಲಿ)</th></tr><tr><td>2018-19</td><td>46</td><td>4,28,500/-</td></tr><tr><td>2019-20</td><td>55</td><td>5,70,000/-</td></tr><tr><td>2020-21</td><td>77</td><td>8,70,000/-</td></tr><tr><td>2021-22 (31.01.2022ರ ಅಂತ್ಯದವರೆಗೆ)</td><td>31</td><td>8,90,000/-</td></tr></table></td></tr>
</table>

......2

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ಹುಲಿ ದಾಳಿಯಿಂದ ಜಾನುವಾರುಗಳು ಮೃತಪಟ್ಟಾಗ ಈಗ ವಿತರಿಸುತ್ತಿರುವ ಅಲ್ಪ ಪ್ರಮಾಣದ ಪರಿಹಾರದ ಬದಲು ಮೃತಪಟ್ಟ ಜಾನುವಾರುವಿನ ಅಂದಿನ ಮಾರುಕಟ್ಟೆ ಮೌಲ್ಯದ ಬೆಲೆಗೆ ಸಮಾನವಾಗಿ ಪರಿಹಾರ ನೀಡಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ?	ಹುಲಿ ದಾಳಿಯಿಂದ ಜಾನುವಾರುಗಳು ಮೃತಪಟ್ಟಾಗ ಈಗ ವಿತರಿಸುತ್ತಿರುವ ಅಲ್ಪ ಪ್ರಮಾಣದ ದಯಾತ್ಮಕ ಧನದ ಬದಲು ಮೃತಪಟ್ಟ ಜಾನುವಾರುವಿನ ಅಂದಿನ ಮಾರುಕಟ್ಟೆ ಮೌಲ್ಯದ ಬೆಲೆಗೆ ಸಮಾನವಾಗಿ ದಯಾತ್ಮಕ ಧನ ನೀಡುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಅಪಜೀ 25 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು